ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಮಂಗಳವಾರ, ದಿನಾಂಕ : 08 ನೇ ಡಿಸೆಂಬರ್, 2020

ಮೈಸೂರು ಲ್ಯಾಂಪ್ಸ್ ಉದ್ಯಮದ ಆಸ್ತಿಯ ಬಗ್ಗೆ

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-

104 (156) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮೈಸೂರು ಲ್ಯಾಂಪ್ಸ್ ಉದ್ಯಮವನ್ನು ಯಾವಾಗ ಎಲ್ಲಿ ಪ್ರಾರಂಭಿಸಲಾಯಿತು ; ಈ ಉದ್ಯಮದ ನಷ್ಟಕ್ಕೆ ಕಾರಣಗಳೇನು; (ವಿವರವಾದ ಮಾಹಿತಿ ಒದಗಿಸುವುದು)

(ಆ) ಮೈಸೂರು ಲ್ಯಾಂಪ್ಸ್ ಕಂಪನಿಯ ಆಸ್ತಿಗಳು ಯಾವುವು ; ಅವುಗಳು ಎಲ್ಲಿವೆ ; ಅವುಗಳ ಇಂದಿನ ಮೌಲ್ಯವೇನು ; ಇದರ ಮೇಲೆ ಸರ್ಕಾರದ ಹೊಣೆಗಾರಿಕೆ ಎಷ್ಟಿದೆ ; (ವಿವರವಾದ ಮಾಹಿತಿ ಒದಗಿಸುವುದು)

(ಇ) ಈ ಕಂಪನಿಯ ಆಸ್ತಿಯನ್ನು ಸರ್ಕಾರ ತನ್ನ ವಶಕ್ಕೆ ನೇರವಾಗಿ ತೆಗೆದುಕೊಂಡಿದೆಯೇ ಅಥವಾ ಇಲ್ಲವೇ ; ಇಲ್ಲದಿದ್ದರೆ ಕಾರಣಗಳೇನು ; (ವಿವರವಾದ ಮಾಹಿತಿ ಒದಗಿಸುವುದು)

(ಈ) ನಗರದ ಹೃದಯ ಭಾಗದಲ್ಲಿರುವ ಕಂಪನಿಯ ಆಸ್ತಿಯನ್ನು ಸರ್ಕಾರವೇ ನೇರವಾಗಿ ತನ್ನ ವಶಕ್ಕೆ ತೆಗೆದುಕೊಂಡು ಸಾರ್ವಜನಿಕರಿಗೆ ಅನುಕೂಲವಾಗುವಂತೆ ಸರ್ಕಾರಿ ಮೆಡಿಕಲ್ ಕಾಲೇಜು ಮತ್ತು ಇತರೆ ಸಾರ್ವಜನಿಕ ಉಪಯೋಗಕ್ಕೆ ಬಳಸಲು ಇರುವ ತೊಂದರೆಗಳೇನು ? (ವಿವರವಾದ ಮಾಹಿತಿ ಒದಗಿಸುವುದು)